ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಪುರಸ್ಕೃತ....

# ಸತ್ಯಾಶ್ರಯ

ಸತ್ಯಕ್ಕೆ ಆಶ್ರಯ

ಪ್ರಾದೇಶಿಕ ಕನ್ನಡ ದಿನ ಪತ್ರಿಕೆ

SATYASHRAYA REGIONAL KANNADA DAILY

ಸಂಪಾದಕ: ಆನಂದ ಎಸ್. ಜಿಗಜಿನ್ನಿ BSc.LLB

ಸಂಸ್ಥಾಪಕ ಸಂಪಾದಕರು: ಲಿಂ||ಶರಣಬಸವರಾಜ ಎಸ್. ಜಿಗಜಿನ್ನಿ

ವಿಜಯಪುರ, ಬೆಳಗಾವಿ, ಧಾರವಾಡ, ಗದಗ, ಕೊಪ್ಪಳ, ವಿಜಯನಗರ, ರಾಯಚೂರ, ಯಾದಗಿರಿ, ಹಾವೇರಿ ಜಿಲ್ಲೆಗಳಲ್ಲಿ ಪ್ರಸಾರಿತ.

E-mail: satyashraya@gmail.com | www. satyashrayanews.com

ಸಂಪುಟ : 35 VOLUME : 35 | ಸಂಚಿಕೆ : 331 ISSUE : 331 | ಶುಕ್ರವಾರ FRIDAY | ದಿನಾಂಕ: 14-03-2025 Date: 14-03-2025 | ಪುಟ : 08 PAGE : 08 | KRN IV/36, RNI:50599/93 | PMG KA/NK/362/03-05 | 9845167186, 7019500547

## ಅಂಗಾಂಗ ದಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವಾಗಲಿ: ನ್ಯಾ. ಶಿವರಾಜ್ ಪಾಟೀಲ್



ಬೆಂಗಳೂರು– ಅಂಗಾಂಗದಾನ ಮಾಡುವುದರಿಂದ ಮತ್ತೊಬ್ಬರಿಗೆ ಜೀವದಾನ ಮಾಡಿದಂತೆ, ಹೀಗಾಗಿ ಪ್ರತಿಯೊಬ್ಬರೂ ಅಂಗಾಂಗದಾನ ಮಾಡಬೇಕು ಎಂದು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ. ವಿಶ್ವ ಕಿಡ್ನಿ ದಿನಾಚರಣೆ ಪ್ರಯುಕ್ತ ದೀರ್ಘಾವಧಿ ಮೂತ್ರಪಿಂಡ ಕಾಯಿಲೆಯಿಂದಾಗುವ ಆರೋಗ್ಯ ಸಮಸ್ಯೆಯ ಕುರಿತು ಜಾಗೃತಿ ಮೂಡಿಸಲು ಎಸ್‌ಎಸ್ ಸ್ಪರ್ಶ್ ಆಸ್ಪತ್ರೆ ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಂಗಾಂಗ ದಾನ ಮಾನವೀಯತೆಯ ಪರಮೋಚ್ಚ ಕಾರ್ಯಗಳಲ್ಲಿ ಒಂದು. ನಾವೆಲ್ಲರೂ ಈ ಶ್ರೇಷ್ಠ ಕಾರ್ಯವನ್ನು ಬೆಂಬಲಿಸಬೇಕು ಎಂದ ಅವರು ಜೀವ ರಕ್ಷಕ ಅಂಗಾಂಗ ಕಸಿಗೆ ಅನುವು ಮಾಡಿಕೊಡುವ ಕರ್ನಾಟಕ ಅಂಗ ಮತ್ತು ಅಂಗಾಂಶಗಳ ಕಸಿ ಸಂಸ್ಥೆ (SOTTO Karnataka)ಯ ಪಾತ್ರ ಹಾಗೂ ವೈದ್ಯರು, ದಾನಿಗಳ ತ್ಯಾಗವನ್ನು ಶ್ಲಾಘಿಸಿದರು. ಕಿಡ್ನಿ ಸಂಬಂಧಿ ಕಾಯಿಲೆಗಳ ಕುರಿತು ಜಾಗೃತಿ ಮೂಡಿಸುವುದು, ಅಂಗಾಂಗ ದಾನ ಹಾಗೂ ವಿಶ್ವ ದರ್ಜೆಯ ಕಸಿ ಸೌಕರ್ಯಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಅಂಗಾಂಗದಾನ ಮಾಡುವುದರಿಂದ ಮತ್ತೊಬ್ಬರಿಗೆ ಜೀವದಾನ ಮಾಡಿದಂತೆ. ವರದಿಗಳ ಪ್ರಕಾರ ಮಹಿಳೆಯರೇ ಹೆಚ್ಚು ಅಂಗಾಂಗದಾನ ಮಾಡಲು ಮುಂದಾಗುತ್ತಾರೆ. ಪುರುಷರೂ ಸಹ ಅಂಗಾಂಗದಾನ ಮಾಡಲು ಮುಂದಾಗಬೇಕು. ನಮ್ಮ ದೇಹದಲ್ಲಿ ಬದುಕಿರುವಾಗಲೇ ಅಂಗಾಂಗ ದಾನ ಮಾಡುವುದರಿಂದ ನಮ್ಮ ಆರೋಗ್ಯದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ಬಗ್ಗೆ ಜಾಗೃತಿಯ ಅವಶ್ಯಕತೆ ಇದೆ ಎಂದು ಹೇಳಿದರು.

ಸ್ಪರ್ಶ್ ಆಸ್ಪತ್ರೆ ಸಮೂಹದ ಅಧ್ಯಕ್ಷರಾದ ಡಾ.ಶರಣ್ ಶಿವರಾಜ್ ಪಾಟೀಲ್ ಮಾತನಾಡಿ ಕಿಡ್ನಿ ಸಮಸ್ಯೆಯು ಕೇವಲ ವೈದ್ಯಕೀಯವಾಗಿ ಮಾತ್ರವಲ್ಲ ಇದು ಕುಟುಂಬಗಳ ಮೇಲೆ ಅಪಾರವಾದ ಆರ್ಥಿಕ ಮತ್ತು ಭಾವನಾತ್ಮಕ ಹೊರೆ ಬೀಳುವಂತೆ ಮಾಡುತ್ತದೆ. ಆರಂಭಿಕ ಹಂತದಲ್ಲೇ ರೋಗ ನಿರ್ಣಯ, ಆರೋಗ್ಯಕರವಾದ ಜೀವನ ಶೈಲಿ ರೂಢಿಸಿಕೊಳ್ಳುವುದು ಹಾಗೂ ಮಧುಮೇಹದಂತಹ ಸಮಸ್ಯೆಗಳನ್ನು ಸೂಕ್ತವಾಗಿ ನಿಭಾಯಿಸುವುದು ದೀರ್ಘಾವಧಿ ಕಿಡ್ನಿ ಸಮಸ್ಯೆಯ ಅಪಾಯವನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಬಲ್ಲದು. ಅತ್ಯಾಧುನಿಕ ಸೌಲಭ್ಯಗಳು, ಸುಧಾರಿತ ಪರಿಣತಿಯೊಂದಿಗೆ ಸ್ಪರ್ಶನ ವೈದ್ಯಕೀಯ ತಂಡವು ಕಿಡ್ನಿ ಕಸಿ ಮೂಲಕ ಜೀವ ಉಳಿಸಬಲ್ಲ ಚಿಕಿತ್ಸೆ ಮತ್ತು ಆರೈಕೆಗೆ ಸರ್ವಸನ್ನದ್ಧವಾಗಿದ್ದು ಕಿಡ್ನಿ ಕಸಿ ಅಗತ್ಯವಿರುವ ರೋಗಿಗಳ ಪಾಲಿಗೆ ಹೊಸ ಭರವಸೆ ಮೂಡಿಸಿದೆ ಎಂದು ತಿಳಿಸಿದರು.

## ಹೋಳಿ ಸಾಮರಸ್ಯದ ಪ್ರತೀಕ



ಬಾಗಲಕೋಟೆ– ಕರ್ನಾಟಕ, ದೇಶದ ಸಾಂಸ್ಕೃತಿಕ ಲೋಕಕ್ಕೆ ಬಾಗಲಕೋಟೆ ಹೋಳಿ ಬಹು ದೊಡ್ಡ ಕೊಡುಗೆ ನೀಡಿದೆ. ಇಂತಹ ಹೋಳಿ ಅಳಿಸಿ ಹೋಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ. ಹೋಳಿ ಹಬ್ಬವು ಸಾಮರಸ್ಯದ ಪ್ರತೀಕ ಎಂದು ಉದ್ಯಮಿ ಸಂತೋಷ ಹೊಕ್ರಾಣಿ ಹೇಳಿದರು.

ನಗರದ ವಲ್ಲಭಾಯಿ ಚೌಕನಲ್ಲಿ ಬುಧವಾರ ರಾತ್ರಿ ಬಾಗಲಕೋಟೆ ಹೋಳಿ ಆಚರಣಾ ಸಮಿತಿ ಹಮ್ಮಿಕೊಂಡಿದ್ದ ಹೋಳಿ ಉತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಖ್ಯಾತಿ ಪಡೆದಿರುವ ಬಾಗಲಕೋಟೆ ಹೋಳಿ ಹಬ್ಬ ಇಲ್ಲಿನ ಸಾಂಸ್ಕೃತಿಕ ಶ್ರೀಮಂತಿಕೆ ಸಾರುತ್ತದೆ. ಹಬ್ಬದ ಮೂಲಕ ಪರಸ್ಪರ ಪ್ರೀತಿ, ಬಾಂಧವ್ಯ ಬೆಳೆಯುತ್ತದೆ. ಇತ್ತೀಚೆಗೆ ಹಬ್ಬ ಆಧುನಿಕತೆಗೆ ತೆರೆದುಕೊಂಡಿದ್ದು, ರೇನ್ ಡ್ಯಾನ್ಸ್ ಆಕರ್ಷಣೆಯಿಂದ ಯುವಜನತೆ ಹಬ್ಬದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಮುಂದಿನ ಪೀಳಿಗೆಗೂ ಹಬ್ಬದ ಸಂಪ್ರದಾಯ ವರ್ಗಾವಣೆಯಾಗಲಿ ಎಂದು ತಿಳಿಸಿದರು.

ಪತ್ರಕರ್ತ ರವಿರಾಜ ಗಲಗಲಿ ಮಾತನಾಡಿ, ಬಾಗಲಕೋಟೆ ಹೋಳಿ ಹಲವು ವೈಶಿಷ್ಟತೆ ಹೊಂದಿದೆ. ನೂರಾರು ವರ್ಷಗಳಿಂದ ನಡೆದುಕೊಂಡು ಬಂದ ಪದ್ಧತಿ ಇಂದಿಗೂ ಮುಂದುವರೆದಿದೆ. ಇಲ್ಲಿನ ಹಲಗೆ ಸದ್ದು, ಬಣ್ಣದ ರಂಗು ದೆಹಲಿಯಲ್ಲಿ ಮೊಳಗಿದೆ. ಮುಳಗಡೆಯಾದ ಬಳಿಕ ಕ್ಷೀಣಿಸಿರುವ ಹಬ್ಬದ ಸೊಬಗು ಹೊಸ ನಗರದಲ್ಲಿ ವಿಜೃಂಭಣೆಯಿಂದ ಆಚರಿಸುವಂತಾಗಬೇಕು ಎಂದು ಆಶಿಸಿದರು.

ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆಣ್ಣವರ, ಬಸವೇಶ್ವರ ಬ್ಯಾಂಕ್ ನಿರ್ದೇಶಕ ಶರಣು ಹೆರಕಲ್, ಬಾಬುದಾರರಾದ ಎನ್.ಆರ್.ಕುಲಕರ್ಣಿ, ಪ್ರವೀಣ ಖಾತೇದಾರ, ಹೋಳಿ ಆಚರಣೆ ಸಮಿತಿ ಅಧ್ಯಕ್ಷ ಕಳಕಪ್ಪ ಬಾದೋಡಗಿ, ಪ್ರಧಾನ ಕಾರ್ಯದರ್ಶಿ ಮಹಾಬಳೇಶ್ವರ ಗುಡಗುಂಟಿ, ಸಂಘಟನಾ ಕಾರ್ಯದರ್ಶಿ ಸಂಜೀವ ವಾಡಕರ, ರವಿ ಕುಮಟಗಿ ಸದಾನಂದ ನಾರಾ ಇದ್ದರು.

## ಅರಣ್ಯ ಒತ್ತುವರಿ ತೆರವುಗೊಳಿಸಿದ ಅಧಿಕಾರಿಗಳು

**ಜಮಖಂಡಿ– ತಾಲೂಕಿನ ಹುಲ್ಯಾಳ ಗ್ರಾಮದಲ್ಲಿ ಒತ್ತುವರಿ ಮಾಡಿಕೊಂಡಿದ್ದ ಅರಣ್ಯ ಪ್ರದೇಶವನ್ನು ಅಧಿಕಾರಿಗಳು ತೆರವುಗೊಳಿಸಿದರು.**

**ತಾಲೂಕಿನ ಹುಲ್ಯಾಳ ಗ್ರಾಮದ ಸರ್ವೆ ನಂ.48ರಲ್ಲಿನ 7.10 ಎಕರೆ ಪ್ರದೇಶ ಅರಣ್ಯ ಪ್ರದೇಶ ಜಾಗೆಯನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದ ಗುಂಡಪ್ಪ ಕ. ಕಿಶೋರಿ, ವೆಂಕಪ್ಪ ರಾ. ಬಡಚಿ ಅವರ ಮೇಲೆ ಪ್ರಕರಣ ದಾಖಲಾಗಿತ್ತು. ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಆದೇಶದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ. ರುಥ್ರೇನ್ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರದೀಪ ರಾಠೋಡ ಮಾರ್ಗದರ್ಶನದಲ್ಲಿ ವಲಯ ಅರಣ್ಯ ಅಧಿಕಾರಿ ಕಿರಣ ದಾಸರೆಡ್ಡಿ, ಉಪ ವಲಯ ಅರಣ್ಯ ಅಧಿಕಾರಿಗಳಾದ ಎಮ್.ಎಸ್. ನಾವಿ, ಮಹೇಶ ಗುಡಿಮನಿ, ಇದ್ದರು.**

## ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ



ಲೋಕಾಪುರ– ವಿದ್ಯಾರ್ಥಿಗಳು ನಿರಂತರ ಅಧ್ಯಯನದ ಜತೆಗೆ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿದರೆ ಸಾಧನೆಯ ಶಿಖರ ಏರಲು ಸಾಧ್ಯ ಎಂದು ಮಹಾಲಿಂಗಪುರದ ಕೆಎಲ್‌ಇ ಕಾಲೇಜು ಉಪನ್ಯಾಸಕ ಶಿವಲಿಂಗ ಸಿದ್ನಾಳ ಹೇಳಿದರು.

ಪಟ್ಟಣದ ಲೋಕೇಶ್ವರ ದೇವಸ್ಥಾನದ ಸಾಂಸ್ಕೃತಿಕ ಭವನದಲ್ಲಿ ರಾಜಾ ಭೈರವಸಿಂಹ ಘೋರ್ಪಡೆ ಪ್ರೌಢಶಾಲೆ ಹಾಗೂ ಲೋಕೇಶ್ವರ ಶಿಕ್ಷಣ ಸಮಿತಿಯ ಹಿರಿಯ ಪ್ರಾಥಮಿಕ ಶಾಲೆ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ 7ನೇ ತರಗತಿ ಹಾಗೂ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಶುಭಕೋರುವ ಹಾಗೂ ಪಠ್ಯೇತರ ಚಟುವಟಿಕೆ ಮುಕ್ತಾಯ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ನಿರ್ದಿಷ್ಟ ಗುರಿ ಹೊಂದಿ ಅದರ ಸಾಧನೆಗೆ ನಿರಂತರವಾಗಿ ಶ್ರಮ ವಹಿಸಿದರೆ ಉನ್ನತ ಸ್ಥಾನ ಪಡೆಯಬಹುದು. ಪಠ್ಯದ ಜತೆಗೆ ದಿನ ಪತ್ರಿಕೆಗಳು, ಕಥೆ, ಕಾದಂಬರಿ, ಸಣ್ಣ ಕಥೆಗಳು ಸೇರಿ ಆಸಕ್ತಿದಾಯಕ ಪುಸ್ತಕಗಳನ್ನು ಓದುವ ಹವ್ಯಾಸವನ್ನಾಗಿ ಮಾಡಿಕೊಂಡು ಸ್ವಾಮಿ ವಿವೇಕಾನಂದರಂತೆ ಮಹಾನ್ ಸಾಧಕರಾಗಬೇಕು ಎಂದರು.

ಸಂಸ್ಥೆ ಖಜಾಂಜಿ ಹಾಗೂ ನಿವೃತ್ತ ಪ್ರಾಚಾರ್ಯ ಡಿ.ಎಂ. ತುಬಾಕಿ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ಗುಣಗಳನ್ನು ಅಳವಡಿಸಿಕೊಂಡು ಸಮಾಜದ ಆದರ್ಶ ವ್ಯಕ್ತಿಗಳಾಗಿ ಬದುಕಬೇಕು ಎಂದರು. ಮಹಾಲಿಂಗಪುರದ ಕೆಎಲ್‌ಇ ಕಾಲೇಜು ಉಪನ್ಯಾಸಕ ಶಿವಲಿಂಗ ಸಿದ್ನಾಳ, ಪತ್ರಕರ್ತ ಸಲೀಮ ಕೊಪ್ಪದ ಹಾಗೂ ಪಠ್ಯೇತರ ಚಟುವ ಟಿಕೆ ನಡೆಸಲು ಧನಸಹಾಯ ನೀಡಿದ ಪ್ರಥಮ ದರ್ಜೆ ಗುತ್ತಿಗೆದಾರ ಕಾಶಿಲಿಂಗ ನಿರ್ವಾಣಿ ಅವರನ್ನು ಸಂಸ್ಥೆವತಿಯಿಂದ ಸನ್ಮಾನಿಸಲಾಯಿತು. ಸಂಸ್ಥೆ ಉಪಾಧ್ಯಕ್ಷ ಗಿರೀಶ ಕೊಪ್ಪದ, ಸದಸ್ಯ ಎಸ್.ಟಿ. ಬುದ್ನಿ, ಪ್ರಭಾರಿ ಮುಖ್ಯಾಧ್ಯಾಪಕ ಎಸ್.ಎಫ್. ನಾಯಕ, ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ಎಸ್.ಎಂ. ಹಡಪದ, ಶಿಕ್ಷಕ ಎ.ಕೆ. ಚನ್ನಪ್ಪಗೌಡರ, ಪತ್ರಕರ್ತರಾದ ಸಿದ್ದು ಹೂಗಾರ, ಈರಪ್ಪ ಸಾಳಗುಂದಿ ಮತ್ತಿತರರಿದ್ದರು.

## ಶ್ರೀಗಳ ಬದುಕಿನ ಪ್ರತಿಕ್ಷಣವೂ ಅಧ್ಯಾತ್ಮದ ಸಿಂಚನ




ತೇರದಾಳ: ಅಧ್ಯಾತ್ಮದೊಂದಿಗೆ ಶಿಕ್ಷಣಕ್ಕೆ ಪ್ರಾಮುಖ್ಯ ನೀಡಿ ಸಂಸ್ಕೃತಿಯ ಉಳಿವಿಗೆ ಅವಿರತವಾಗಿ ಶ್ರಮಿಸುತ್ತಿರುವ ಶಿವಾನಂದ ಶ್ರೀಗಳ ಕಾರ್ಯ ಶ್ಲಾಘನೀಯವಾಗಿದೆ ಎಂದು ಹುಬ್ಬಳ್ಳಿ ಹಾನಗಲ್ ಜಗದ್ಗುರು ಮೂರು ಸಾವಿರಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿಗಳು ಹೇಳಿದರು.

ಸಮೀಪದ ಹಳಿಂಗಳಿ ಗ್ರಾಮದ ಸಿದ್ಧಲಿಂಗೇಶ್ವರ ಕಮರಿಮಠದ ಲಿಂಗೈಕ್ಯ ಶರಣಬಸವೇಶ್ವರ ಮಹಾರಾಜರ 42ನೇ ಪುಣ್ಯಾರಾಧನೆ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಉತ್ತಮ ಸಮಾಜ ನಿರ್ಮಾಣದಲ್ಲಿ ಮಠ–ಮಾನ್ಯಗಳ ಕೊಡುಗೆ ಅನನ್ಯವಾಗಿವೆ. ಪೂಜ್ಯ ಶರಣಬಸವೇಶ್ವರರು ಪವಾಡ ಪುರುಷರಾಗಿದ್ದು, ಅವರ ಬದುಕಿನ ಪ್ರತಿಕ್ಷಣವೂ ಆಧ್ಯಾತ್ಮಿಕ ಸಿಂಚನ ಪಸರಿಸುತ್ತದೆ ಎಂದರು.

ರಬಕವಿ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಮಾತನಾಡಿ, ಗುರುವಿನ ನಾಮಸ್ಮರಣೆಯಿಂದ ಮಾತ್ರ ಜನ್ಮವು ಪಾವನವಾಗಲು ಸಾಧ್ಯ. ಹಾಗಾಗಿ ಮಠದ ಪರಂಪರೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬ ಭಕ್ತರ ಮೇಲಿದೆ ಎಂದರು.

ಗುಳೇದಗುಡ್ಡ ಮರಡಿ ಮಠದ ಅಭಿನವ ಕಾಡಸಿದ್ಧೇಶ್ವರ ಶಿವಾಚಾರ್ಯರು, ಹೂವಿನಹಿಪ್ಪರಗಿ ಪತ್ರಿವನ ಮಠದ ಮಾತೋಶ್ರೀ ದಾಕ್ಷಾಯಣಿ ದೇವಿ, ಜಕನೂರಿನ ಸಿದ್ಧಲಿಂಗದೇವರು, ಹನಗಂಡಿಯ ರಾಮಾನಂದ ಅವಧೂತಾಶ್ರಮದ ಚಿದಾನಂದ ಅವಧೂತರು ಮಾತನಾಡಿದರು. ಸಾಧಕರಿಗೆ ಶರಣ ಬಸವಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶ್ರೀಮಠದ ಉತ್ತರಾಧಿಕಾರಿ ಶರಣಬಸವ ದೇವರು ಪ್ರತಿದಿನ ಪ್ರವಚನ ನೀಡಿದರು.

ನಿರಂತರ ಐದು ದಿನಗಳವರೆಗೆ ಜರುಗಿದ ಜಾತ್ರೆಯಲ್ಲಿ ಆರೋಗ್ಯ ಗೋಷ್ಠಿ, ನೇಗಿಲ ನಮನ, ಬುತ್ತಿಯಾತ್ರೆ ಸೇರಿ ಹಲವು ಕಾರ್ಯಕ್ರಮಗಳು ಮೆರುಗು ನೀಡಿದವು.

ಜಾತ್ರಾ ಅಂಗವಾಗಿ ಪ್ರತಿದಿನ ಬೆಳಗ್ಗೆ ವಿಶೇಷ ಪೂಜಾದಿಗಳು ಜರುಗಿದವು. ಶ್ರೀಗಳ ಪಾದಪೂಜೆ, ಭಜನೆ, ಸದ್ಭಕ್ತರಿಂದ ಓಂಕಾರ ಪಠಣ, ರಕ್ತದಾನ ಶಿಬಿರ, ಮಕ್ಕಳ ನಾಟ್ಯ ಸಂಜೆ, ಜಂಗೀ ನಿಕಾಲಿ ಕುಸ್ತಿ ನಡೆದವು. ಐದು ದಿನಗಳ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು, ಅಷ್ಟಮಠಗಳ ಸದ್ಭಕ್ತರು ಸೇರಿ ಸಹಸ್ರಾರು ಜನರು ಭಾಗಿಯಾಗಿದ್ದರು. ಪ್ರತಿದಿನ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

## ನಗರಸಭೆಯಲ್ಲಿ ಶ್ರೀರೇಣುಕಾಚಾರ್ಯ ಜಯಂತಿ ಆಚರಣೆ



ರಬಕವಿ–ಬನಹಟ್ಟಿ– ತಾಲೂಕಿನ ರ–ಬ ನಗರಸಭೆಯ ಸಭಾಭವನದಲ್ಲಿ ಸರ್ಕಾರದ ನಿರ್ದೇಶನದಂತೆ ಶ್ರೀರೇಣುಕಾಚಾರ್ಯರ ಭಾವ ಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿ ಜಯಂತಿಯನ್ನು ಆಚರಣೆ ಮಾಡಿದರು.

ಬನಹಟ್ಟಿಯ ಶ್ರೀ,ಮಠದ ಶರಣಬಸವ ಶ್ರೀಗಳು ಹಾಗು ಚಿಮ್ಮಡದ ವಿರಕ್ತಮಠದ ಪ್ರಭು ಶ್ರೀಗಳು ನಗರಸಭೆಗೆ ಆಗಮಿಸಿ ಶ್ರೀ,ರೇಣುಕಾಚಾರ್ಯರ ಆಧ್ಯಾತ್ಮಿಕ ಚಿಂತಣೆಯನ್ನು ಹೇಳಿ ಭಾವ ಚಿತ್ರಕ್ಕೆ ಪುಷ್ಪಾರ್ಚಣೆ ಮಾಡಿದರು.

ಇದೇ ಸಂದರ್ಭದಲ್ಲಿ ಪೌರಾಯುಕ್ತ ಜಗದಿಶ ಇಟ್ಟಿ, ಸ್ಥಾಯಿ ಸಮಿತಿಯ ಅಧ್ಯಕ್ಷ ಅರುಣ ಬುದ್ನಿ, ವ್ಯವಸ್ಥಾಪಕ ಮುಕೇಶ ಬನಹಟ್ಟಿ, ದುಂಡಯ್ಯ ಲಿಂಗದ್, ಶಿವರುಧ್ರಯ್ಯ ಕಾಡದೇವರ, ಶಂಭುಲಿಂಗಯ್ಯ ಹಿರೇಮಠ, ಗಂಗಯ್ಯ ಬಂಗಿ, ದಯಾನಂದ ಬಾಗಲಕೋಟಮಠ, ಬಾಳಯ್ಯ ಪೂಜಾರಿ, ಬಸವರಾಜ ಅಮ್ಮಣಗಿಮಠ, ಗಂಗಯ್ಯ ಹಿರೇಮಠ. ಸೇರಿದಂತೆ ಅನೇಕರು ಇದ್ದರು.

## ಸಹಕಾರ ಭಾರತಿಗೆ ಎಂ.ಎಸ್.ದಡ್ಡೇನ್ನವರ ಸಾರಥಿ



ಬಾಗಲಕೋಟೆ– ಸಂಘ ಪರಿವಾರದ ಅಂಗ ಸಂಸ್ಥೆ ಸಹಕಾರ ಭಾರತಿ ಸಂಘಟನೆಯ ಜಿಲ್ಲಾಧ್ಯಕ್ಷರಾಗಿ ನೇಕಾರ ಮುಖಂಡ, ಹಿರಿಯ ತಜ್ಞ ಡಾ. ಎಂ.ಎಸ್.ದಡ್ಡೇನ್ನವರ ಅವರನ್ನು ಆಯ್ಕೆ ಮಾಡಲಾಗಿದೆ.

ಡಾ.ಎಂ.ಎಸ್.ದಡ್ಡೇನ್ನವರ ಅವರು ಸಹಕಾರಿ ಕ್ಷೇತ್ರದಲ್ಲಿ ಅನುಭವಿಗಳಾಗಿದ್ದು, ಕ್ಷೇತ್ರದ ಬೆಳವಣಿಗೆ ದೃಷ್ಟಿಯಿಂದ ಅವರನ್ನು ಜಿಲ್ಲಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ನೂತನವಾಗಿ ಆಯ್ಕೆಯಾದ ಅವರನ್ನು ಸಹಕಾರ ಭಾರತಿ ರಾಜ್ಯ ಉಪಾಧ್ಯಕ್ಷ ಜಿ.ಎನ್.ಪಾಟೀಲ, ಮುಖಂಡರಾದ ರಂಗನಗೌಡ ದಂಡನ್ನವರ, ಜಯಂತ ಕುರಂದವಾಡ, ರಾಜು ಶಿಂತ್ರೆ, ವೆಂಕಣ್ಣ ಹಲಗಲಿ, ಅಶೋಕ ಜಿಗಳೂರ, ಜಿದ್ದಿಮನಿ, ಶೈಲಜಾ ಸಂಗಳದ ಸನ್ಮಾನಿಸಿದರು. ದಡ್ಡೇನ್ನವರ ಅವರಿಗೆ ಮಾಜಿ ಶಾಸಕ ವೀರಣ್ಣ ಚರಂತಿ ಮಠ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಟಿ. ಪಾಟೀಲ ಅಭಿನಂದಿಸಿದ್ದಾರೆ.

# ಜಗದ್ಗುರು ರೇಣುಕಾಚಾರ್ಯರು ಸಮಾಜದ ಬೆಳಕು: ಸೋಮಲಿಂಗ ಗೆಣ್ಣೂರ



ವಿಜಯಪುರ- ಶ್ರೀ ಜಗದ್ಗುರು ರೇಣುಕಾಚಾರ್ಯ ಅವರು ತಮ್ಮ ತತ್ವ ಸಿದ್ಧಾಂತಗಳ ಮೂಲಕ ಸಮಾಜದ ಓರೆ ಕೋರೆಗಳನ್ನು ಹೋಗಲಾಡಿಸಲು ಶ್ರಮಿಸಿ ಇಡೀ ಸಮಾಜಕ್ಕೆ ಬೆಳಕಾದವರು ಎಂದು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರು ಹೇಳಿದರು.

ನಗರದ ಶ್ರೀ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಬುಧವಾರ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಗದ್ಗುರು ರೇಣುಕಾಚಾರ್ಯರು ತಮ್ಮ ತತ್ವ, ಸಿದ್ಧಾಂತಗಳಿಂದ ಈ ಜಗತ್ತಿಗೆ ಶಾಂತಿ ಹಾಗೂ ಸಹಬಾಳ್ವೆಯ ಸಂದೇಶ ಸಾರಿದಾರೆ ಎಂದರು.

ಮಾನವ ಜನಾಂಗದ ಏಳಿಗೆಗಾಗಿ, ಸಮಾಜದಲ್ಲಿನ ನ್ಯೂನ್ಯತೆಗಳನ್ನು,ಮೌಢ್ಯತೆಗಳನ್ನು ತೊಲಗಿಸಲು, ಜಗದ್ಗುರು ರೇಣುಕಾಚಾರ್ಯರು ಸಮಾಜಕ್ಕೆ ಸನ್ಮಾರ್ಗ ತೋರಿದರು.

ಈ ಮಹನೀಯರ ತತ್ವಾದರ್ಶ ಅವರ ವಿಚಾರಗಳು ಸಾರ್ವಕಾಲಿಕವಾಗಿಯೂ ಇಂದಿಗೂ ಪ್ರಸ್ತುತವಾಗಿದ್ದು, ಇಂದಿನ ಯುವ ಪೀಳಿಗೆ ಮಹನೀಯರ ತತ್ವ ಸಿದ್ಧಾಂತಗಳನ್ನು ಮೈಗೂಢಿಸಿಕೊಂಡು ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು. ಸಮಾಜದಲ್ಲಿ ಸುಖ-ಶಾಂತಿ ನೆಮ್ಮದಿಯಿಂದ ಉತ್ತಮ ಜೀವನ ಕಟ್ಟಿಕೊಳ್ಳಲು ದಾರ್ಶನಿಕರು ನೀಡಿದ ಉಪದೇಶಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಮಹಾದೇವಯ್ಯ ಶಾಸ್ತ್ರೀಯವರು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ, ಜಗದ್ಗುರು ರೇಣುಕಾಚಾರ್ಯರು ಸರ್ವರ ಒಳಿತನ್ನು ಬಯಸಿ ಅವರು ಆ ದಿಸೆಯಲ್ಲಿ ಶ್ರಮಿಸಿದ್ದರು. ಮೌಢ್ಯತೆಯ ತೊರೆದು ಉತ್ತಮ ಬದುಕು ಕಟ್ಟಿಕೊಳ್ಳುವ ದಿಸೆಯಲ್ಲಿನ ಅವರ ಚಿಂತನೆಗಳನ್ನು ಅರಿತುಕೊಳ್ಳಬೇಕು. ನಾವೆಲ್ಲ ಸಹಬಾಳ್ವೆಯಿಂದ ಬದುಕುವ ನಿಟ್ಟಿನಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಸಮಾಜಕ್ಕೆ ಅವರ ಚಿಂತನೆಗಳ ಮೂಲಕ ಸಂದೇಶ ನೀಡಿದ್ದಾರೆ ಎಂದು ಅವರು ಹೇಳಿದರು. ಮಾಳವಿಕಾ ಜೋಶಿ ಸುಗಮ ಸಂಗೀತ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಉಪ ಆಯುಕ್ತ ವೈ.ಎ. ನಾರಾಯಣಕರ, ಜಿಲ್ಲಾ ಪಂಚಾಯತಿಯ ಯೋಜನಾ, ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ ಎ.ಬಿ. ಅಲ್ಲಾಪುರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಡಿವೈಎಸ್ಪಿ ಡಿ.ಎಸ್. ಧನಗರ ಸೇರಿದಂತೆ ಸಂಜೀವ ಹಿರೇಮಠ, ಎಸ್.ಎಸ್.ಹಿರೇಮಠ, ಗುರು ಗಚ್ಚಿನಮಠ, ಎನ್.ಆರ್.ಮಠ, ವಿಜಯಕುಮಾರ ಹಿರೇಮಠ ಹಿರೂರು, ಚಿದಾನಂದ ಹಿರೇಮಠ, ಪುಷ್ಪಾ ಹಿರೇಮಠ ಸೇರಿದ್ದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಮೆರವಣಿಗೆಗೆ ಚಾಲನೆ: ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಮೆರವಣಿಗೆಗೆ ಚುನಾವಣಾ ವಿಭಾಗದ ತಹಶೀಲ್ದಾರ ಪವಾರ ಹಾಗೂ ಜಿಲ್ಲಾ ಪಂಚಾಯತಿಯ ಯೋಜನಾ, ಅಂದಾಜು ಮತ್ತು ಮೌಲ್ಯ ಮಾಪನ ಅಧಿಕಾರಿ ಎ.ಬಿ.ಅಲ್ಲಾಪುರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ ಅವರು ಶ್ರೀ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು ಗಾಂಧಿ, ಬಸವೇಶ್ವರ ಹಾಗೂ ಅಂಬೇಡ್ಕರ್ ವೃತ್ತದ ಮಾರ್ಗವಾಗಿ ಸಾಗಿ, ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಸಮಾವೇಶಗೊಂಡಿತು.

# ವಿದ್ಯಾರ್ಥಿ ಬದುಕಿಗೆ ಶ್ರದ್ಧೆ-ಸ್ವಯಂ ಶಿಸ್ತಿನ ಗುಣ ಮುಖ್ಯ:ಸುಜಾತಾ ಪೂಜಾರಿ



ಇಂಡಿ- ವಿದ್ಯಾರ್ಥಿಗಳು ಓದುವ,ಬರೆಯುವ,ಜ್ಞಾನ ಬೆಳೆಸಿಕೊಳ್ಳುವ ಜೊತೆಗೆ ಬದುಕಿಗೆ ಅಗತ್ಯವಾದ ಮಾನವೀಯ ಮೌಲ್ಯ ಮತ್ತು ಗುಣಗಳನ್ನು ಬೆಳೆಸಿಕೊಂಡು ಉತ್ತಮ ಪ್ರಜೆಗಳಾಗಬೇಕು ಎಂದು ಇಂಡಿ ತಾಲೂಕ ಅಕ್ಷರ ದಾಸೋಹ ಅಧಿಕಾರಿ ಸುಜಾತಾ ಪೂಜಾರಿ ಹೇಳಿದರು.

ಮಂಗಳವಾರದಂದು ತಾಲೂಕಿನ ಹಿರೇರೂಗಿ ಗ್ರಾಮದ ಕೆಬಿಎಸ್ ,ಕೆಜಿಎಸ್ ಶಾಲೆಯಲ್ಲಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಜೀವನದಲ್ಲಿ ನಿರ್ದಿಷ್ಟ ಗುರಿ ಹೊಂದುವ ಜೊತೆಗೆ ಗುರು ಭಕ್ತಿ, ಶ್ರದ್ಧೆ, ಆಸಕ್ತಿ, ಸ್ವಯಂ ಶಿಸ್ತಿನ ಗುಣಗಳನ್ನು ಮೈಗೂಡಿಸಿಕೊಂಡು ಸಾಧನೆಯ ಮಾರ್ಗದಲ್ಲಿ ಸಾಗಬೇಕು ಎಂದು ಹೇಳಿದರು.

ಸರ್ವಜ್ಞ ಕರಿಯರ್ ಅಕಾಡೆಮಿಯ ಸಂಸ್ಥಾಪಕ ನಾಗೇಶ ಹೆಗಡ್ಯಾಳ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಒಳ್ಳೆಯ ನಾಗರಿಕರಾಗಲು ಸತತ ಪರಿಶ್ರಮ ಅಗತ್ಯ. ವಿದ್ಯಾರ್ಥಿ ಜೀವನ ಬಂಗಾರದ ಜೀವನ ಅದನ್ನು ಸದುಪಯೋಗಪಡಿಸಿಕೊಂಡು ಒಳ್ಳೆಯ ಅಂಕ ಪಡೆದು ಪಾಲಕರಿಗೆ ಹಾಗೂ ಶಾಲೆಗೆ ಒಳ್ಳೆಯ ಕೀರ್ತಿ ತರಬೇಕೆಂದು ಹಾರೈಸಿದರು.

ಶಿಕ್ಷಕ ಸಂತೋಷ ಬಂಡೆ ಮಾತನಾಡಿ, ಗುರು-ಹಿರಿಯರನ್ನು ಗೌರವಿಸುವ, ಪರಸ್ಪರ ಪ್ರೀತಿ, ಸ್ನೇಹ, ಸಹಬಾಳ್ವೆಯಿಂದ ಜೀವನ ಸಾಗಿಸುವ, ಸಕಾರಾತ್ಮಕ ಚಿಂತನೆ, ಸಮಾಜ ಸೇವೆಯಂತಹ ಜೀವನದ ಮೌಲ್ಯಗಳನ್ನು ವಿದ್ಯಾರ್ಥಿ ದೆಸೆಯಿಂದಲೇ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕೆಬಿಎಸ್ ಎಸ್‌ಡಿಎಂಸಿ ಅಧ್ಯಕ್ಷ ಮಾಳಪ್ಪ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಕೆಜಿಎಸ್ ಎಸ್‌ಡಿಎಂಸಿ ಉಪಾಧ್ಯಕ್ಷ ಪರಶುರಾಮ ಹೊಸಮನಿ ವಿವಿಧ ವಿಭಾಗದಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಿದರು. ಮುಖ್ಯ ಶಿಕ್ಷಕ ಅನಿಲ ಪತಂಗಿ, ಶಿಕ್ಷಕಿ ಶ್ರದ್ಧಾ ಬಂಕಲಗಾ ವಾರ್ಷಿಕ ವರದಿ ವಾಚಿಸಿದರು. ಎಸ್‌ಡಿಎಂಸಿ ಸದಸ್ಯರಾದ ಕಾಶೀನಾಥ ದಳವಾಯಿ, ಪಡೆವ್ವ ನಡುವಿನಮನಿ, ಶಾಲುಬಾಯಿ ಸೈನಸಾಕಳೆ,ಆರತಿ ಗೊರನಾಳ, ಮುಖ್ಯ ಶಿಕ್ಷಕಿ ವ್ಹಿ.ವೈ ಪತ್ತಾರ ಹಾಗೂ ಶಿಕ್ಷಕರಾದ ಎಸ್.ಎಂ ಪಂಚಮುಖಿ, ಸಾವಿತ್ರಿ ಸಂಗಮದ, ಎಫ್.ಎ ಹೊರ್ತಿ, ಭಾಗವಹಿಸಿದ್ದರು.

# ರೇಣುಕಾಚಾರ್ಯ ಜಯಂತಿ ಆಚರಣೆ

ಆಲಮೇಲ- ಜಾತಿ-ಜಾತಿಗಳ ನಡುವಿನ ವೈಷಮ್ಯ ಮೀರಿ ಬೇಳದ ರೇಣುಕಾಚಾರ್ಯರು ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಸಂದೇಶ ಕೊಟ್ಟವರು ರೇಣುಕಾಚಾರ್ಯರು ಎಂದು ಬಸಯ್ಯ ಫಾಳಿಮಠ ಅವರು ಹೇಳಿದ್ದರು ಪಟ್ಟಣದ ತಾಲೂಕಾ ದಂಡಾಧಿಕಾರಿಗಳ ಕಾರ್ಯಲಯದಲ್ಲಿ ಹಮ್ಮಿಕೊಂಡಿದ್ದ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು



ಆಲಮೇಲ ತಾಲೂಕಾ ದಂಡಾದಿಕಾರಿಗಳಾದ ವಿಜಯಕುಮಾರ ಮಾತನಾಡಿ ಎಲ್ಲ ಧರ್ಮದವರು ಸಾಮರಸ್ಯದಿಂದ ಬದುಕಬೇಕು ಎಂದು ಹೇಳಿಕೊಟ್ಟವರು ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವು ಎಲ್ಲರೂ ನಡೆಯೋಣ ಎಂದು ಹೇಳಿದರು

ಮುಖಂಡರಾದ ಶ್ರೀಶೈಲ ಮಠಪತಿ ಮಾತನಾಡಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿಎಂಬ ಸಂದೇಶ ಸಾರಿದವರು ರೇಣುಕಾಚಾರ್ಯರು ಸಾರಿದ್ದಾರೆ ಎಂದರು ರೇಣುಕಾಚಾರ್ಯ ಪೋಟೋ ಪೂಜೆಯನ್ನು ಆಲಮೇಲ ಹೀರೇಮಠದ ಪೂಜ್ಯರಾದ ಶ್ರೀ ವಿರುಪಾಕ್ಷಯ್ಯ ಹೀರೇಮಠ ಅವರು ನೇರವೇರಿಸಿದ್ದರು

ಈ ಕಾರ್ಯಕ್ರಮದಲ್ಲಿ ಮುಖಂಡರಾದ ಪ್ರಭು ವಾಲಿಕಾರ ಮಲ್ಲು ಅಚಲೇರಿ ವಿಶ್ವನಾಥ ಹೀರೇಮಠ ಸಿದ್ದು ಮುಗಳಿ ಈರಯ್ಯ ಮಠ ಪ್ರಭುಗೌಡ ಪಾಟೀಲ ಚನ್ನಯ್ಯ ಅಳೋಳ್ಳಿಮಠ ರುದ್ರುಸ್ವಾಮಿ ಸಿದಯ್ಯ ಮಠ ಇದ್ದರು.

# ಪುರುಷರಲ್ಲಿ ಕಂಡು ಬರುವ ಆಯಾಸಕ್ಕೆ ಕಾರಣಗಳು ಮತ್ತು ಪರಿಹಾರಗಳು



ದೇಹದ ದೌರ್ಬಲ್ಯ ಮತ್ತು ಆಯಾಸಕ್ಕೆ ಹಲವಾರು ಕಾರಣಗಳಿವೆ. ಅದಕ್ಕೆ ತಕ್ಕಂತೆ ಪರಿಹಾರಗಳು ಕೂಡ ಇವೆ.

ನಾವು ಪುಟ್ಟ ಮಕ್ಕಳಾಗಿದ್ದಾಗ ಮತ್ತು ವಯಸ್ಸಾದ ಮೇಲೆ ಸಾಧಾರಣವಾಗಿ ಸ್ವಲ್ಪ ಸುಸ್ತು ಆವರಿಸುತ್ತದೆ. ಆದರೆ ಚೆನ್ನಾಗಿ ತಿಂದು ಉಂಡು ಬೆಳೆಯುವ ವಯಸ್ಸಿನಲ್ಲಿ ಮತ್ತು ಯೌವ್ವನದಲ್ಲಿ ಜೊತೆಗೆ ಮಧ್ಯ ವಯಸ್ಸಿನಲ್ಲಿ ಅಪ್ಪಿ ತಪ್ಪಿ ದೈಹಿಕ ಸುಸ್ತು ಮತ್ತು ಆಯಾಸ ಎದುರಾದರೆ ಅದು ಯೋಚನೆ ಮಾಡಬೇಕಾದ ವಿಷಯವೇ ಆಗಿರುತ್ತದೆ.

ಏಕೆಂದರೆ ಈ ಸಮಯದಲ್ಲಿ ಪ್ರತಿಯೊಬ್ಬರಿಗೂ ದೇಹಕ್ಕೆ ಶಕ್ತಿ ಹೆಚ್ಚಾಗಿರುತ್ತದೆ. ಆದರೆ ಒಂದು ವೇಳೆ ಇಂತಹ ಸಮಸ್ಯೆ ಎದುರಾದರೆ ಅದನ್ನು ಖಂಡಿತ ನಿರ್ಲಕ್ಷ ಮಾಡಬೇಡಿ.

ಸಾಧ್ಯವಾದಷ್ಟು ವೈದ್ಯರನ್ನು ಭೇಟಿಯಾಗಿ ನಿಮಗೆ ಆಗುತ್ತಿರುವ ತೊಂದರೆಯನ್ನು ಸವಿವರವಾಗಿ ಅವರಿಗೆ ತಿಳಿಸಿ ಅವರಿಂದ ಸೂಕ್ತವಾದ ಚಿಕಿತ್ಸೆ ಮತ್ತು ಸಲಹೆಯನ್ನು ಪಡೆದುಕೊಳ್ಳಿ.

ನಿಮಗೆ ಎದುರಾಗುತ್ತಿರುವ ಸುಸ್ತು ಮತ್ತು ಆಯಾಸಕ್ಕೆ ಕಾರಣಗಳು ಏನಿರಬಹುದು ಎಂದು ಹಲವಾರು ಆಯಾಮಗಳಲ್ಲಿ ಯೋಚನೆ ಮಾಡಿ ನೋಡುವುದಾದರೆ, ಈ ಕೆಳಗಿನ ಮಾಹಿತಿ ತೆರೆದುಕೊಳ್ಳುತ್ತದೆ.

**ಇನ್ಸುಲಿನ್ ಪ್ರತಿರೋಧತೆ ಕೂಡ ಒಂದು ಕಾರಣ**

ಈ ವಿಷಯದ ಬಗ್ಗೆ ಆಳವಾಗಿ ತಿಳಿದುಕೊಳ್ಳಬೇಕು ಎಂದರೆ ಮೊದಲು ಇನ್ಸುಲಿನ್ ಪ್ರತಿರೋಧತೆ ಎಂದರೇನು ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು.

ನಮ್ಮ ದೇಹದಲ್ಲಿ ಉತ್ಪತ್ತಿಯಾಗುವ ಇನ್ಸುಲಿನ್ ಎಂಬ ಹಾರ್ಮೋನು ನಮ್ಮ ಜೀವಕೋಶಗಳಿಗೆ ಸರಿಯಾದ ಪ್ರಮಾಣದಲ್ಲಿ ಗ್ಲೂಕೋಸ್ ಅಂಶವನ್ನು ತಲುಪಿಸಲು ಸಾಧ್ಯವಾಗುವುದಿಲ್ಲ.

ರಕ್ತದಲ್ಲಿ ಕಂಡುಬರುವ ಸಕ್ಕರೆ ಅಂಶವನ್ನು ನಮ್ಮ ಜೀವಕೋಶಗಳು ಅಗತ್ಯ ಪ್ರಮಾಣದಲ್ಲಿ ಹೊಂದಲು ಸಾಧ್ಯವಾಗದೇ ಇದ್ದಾಗ ದೇಹದ ವಿವಿಧ ಭಾಗಗಳಿಗೆ ಅದನ್ನು ಪೂರೈಕೆ ಮಾಡಲು ಸಹ ಸಾಧ್ಯವಾಗುವುದಿಲ್ಲ.

**ಸುಸ್ತು, ಆಯಾಸ ಆಗುತ್ತಿದ್ದರೆ....**

ಒಂದು ವೇಳೆ ಯಾವುದೇ ಪುರುಷರು ಯಾವಾಗಲೂ ಸುಸ್ತು, ಆಯಾಸ ಎಂದು ಕಂಪ್ಲೇಂಟ್ ಹೇಳುತ್ತಿದ್ದರೆ, ಅಂತಹ ಪುರುಷರಿಗೆ ಮೊದಲು ಖಾಲಿ ಹೊಟ್ಟೆಯಲ್ಲಿ ಸಕ್ಕರೆ ಕಾಯಿಲೆ ಪರೀಕ್ಷೆ ಮಾಡಿಸಬೇಕು.

ಒಂದು ವೇಳೆ ಪರೀಕ್ಷೆಯಲ್ಲಿ ರಕ್ತದಲ್ಲಿ ಸಕ್ಕರೆ ಪ್ರಮಾಣದ ಅಂಶ ಜಾಸ್ತಿ ಇದ್ದರೆ ಅವರಿಗೆ ಇನ್ಸುಲಿನ್ ಪ್ರತಿರೋಧತೆ ಸಮಸ್ಯೆ ಇದೆ ಎಂದರ್ಥ.

ಸರಿಯಾದ ವೈದ್ಯಕೀಯ ಮಾಹಿತಿಯನ್ನು ಮತ್ತು ಸಲಹೆಯನ್ನು ಈ ಸಂದರ್ಭದಲ್ಲಿ ಸ್ವೀಕರಿಸಿ ಅಚ್ಚುಕಟ್ಟಾದ ಆರೋಗ್ಯಕರವಾದ ಜೀವನ ಶೈಲಿಯನ್ನು ಅಭ್ಯಾಸ ಮಾಡಿಕೊಂಡು ದೇಹದ ತೂಕವನ್ನು ನಿಯಂತ್ರಣ ಮಾಡಿಕೊಳ್ಳುವ ಕಡೆಗೆ ಗಮನ ಹರಿಸಿದರೆ ಒಳ್ಳೆಯ ಜೀವನ ನಡೆಸಲು ಸಾಧ್ಯವಾಗುತ್ತದೆ.

ನಿಮ್ಮ ಜೀವನ ಶೈಲಿಯಲ್ಲಿ ವ್ಯಾಯಾಮ ಮತ್ತು ವಾಕಿಂಗ್, ಜಾಗಿಂಗ್ ಎಲ್ಲವೂ ಸೇರಿದ್ದರೆ ತುಂಬಾ ಉತ್ತಮ. ನಾರಿನ ಅಂಶ ಹೆಚ್ಚಾಗಿರುವ ಧಾನ್ಯಗಳು, ಕಾಳುಗಳು ಮತ್ತು ಬೀನ್ಸ್ ಸೇವಿಸುವುದು ಉತ್ತಮ.

ಆಂಟಿ ಆಕ್ಸಿಡೆಂಟ್ ಅಂಶಗಳು ಹೆಚ್ಚಾಗಿರುವ ಬೆರ್ರಿ ಹಣ್ಣುಗಳು ಸಹ ನಿಮ್ಮ ಆಹಾರ ಪದ್ಧತಿಯಲ್ಲಿ ಸೇರಿದ್ದರೆ ಒಳ್ಳೆಯದು.


ಆಗಾಗ ಬಳಲಿಕೆ ಸುಸ್ತು, ಆಯಾಸ ಆಗುತ್ತಿದ್ದರೆ, ಇದೂ ಕೂಡ ಕಾರಣವಿರಬಹುದು!

**ಥೈರಾಯಿಡ್ ಕಾಯಿಲೆ**

ನಿಮ್ಮ ದೇಹದಲ್ಲಿ ಒಂದು ವೇಳೆ ಥೈರಾಯ್ಡ್ ಹಾರ್ಮೋನಿನ ಪ್ರಮಾಣ ಕಡಿಮೆ ಇದ್ದರೆ, ಇದು ನಿಮ್ಮ ದಿನನಿತ್ಯದ ಕಾರ್ಯಚಟುವಟಿಕೆಗಳ ಮೇಲೆ ತೊಂದರೆ ಉಂಟುಮಾಡಬಹುದು.

ಏಕೆಂದರೆ ನಿಮಗೆ ಈ ಸಮಯದಲ್ಲಿ ಅತಿಯಾದ ಸುಸ್ತು ಮತ್ತು ಆಯಾಸ ಕಂಡುಬರುವ ಸಾಧ್ಯತೆ ಇರುತ್ತದೆ. ನಿಮ್ಮ ದೇಹದ ಮೆಟಬಾಲಿಸಂ ಪ್ರಕ್ರಿಯೆಯನ್ನು ನಿಮ್ಮ ಥೈರಾಯ್ಡ್ ಗ್ರಂಥಿ ನಿಯಂತ್ರಣ ಮಾಡುತ್ತದೆ.

ಥೈರಾಯ್ಡ್ ಕಾಯಿಲೆಯನ್ನು ಪತ್ತೆ ಹಚ್ಚಲು ನಿಮಗೆ ರಕ್ತ ಪರೀಕ್ಷೆಯ ಅಗತ್ಯತೆ ಇರುತ್ತದೆ. ಥೈರಾಯ್ಡ್ ಸಮಸ್ಯೆಯಿಂದ ಬಳಲುತ್ತಿರುವ ಜನರು ಸಾಧ್ಯವಾದಷ್ಟು ಕಾಫಿ ಸೇವನೆಯನ್ನು ಕಡಿಮೆ ಮಾಡಬೇಕು.



ಏಕೆಂದರೆ ಇದರಲ್ಲಿ ಕೆಫಿನ್ ಅಂಶ ಅಡಗಿರುವುದರಿಂದ, ಜೊತೆಗೆ ಅಯೋಡಿನ್ ಅಂಶ ಹೆಚ್ಚಾಗಿರುವ ಉತ್ಪನ್ನಗಳು ಮತ್ತು ಪ್ರೊಟೀನ್ ಅಂಶ ಅಪಾರ ಪ್ರಮಾಣದಲ್ಲಿರುವ ಆಹಾರಗಳನ್ನು ಸೇವನೆ ಮಾಡುವುದರಿಂದ ಥೈರಾಯ್ಡ್ ಗ್ರಂಥಿಯ ಆರೋಗ್ಯವನ್ನು ಅತ್ಯುತ್ತಮ ಪಡಿಸಿಕೊಳ್ಳಬಹುದು. ಜಿಂಕ್ ಅಂಶ ಹೆಚ್ಚಾಗಿರುವ ಆಹಾರಗಳು ಸಹ ಆರೋಗ್ಯಕ್ಕೆ ತುಂಬ ಉತ್ತಮ.



**ಈ ಲಕ್ಷಣಗಳು ಕಂಡು ಬಂದರೆ ಥೈರಾಯ್ಡ್ ಇರಬಹುದು**

**ಅನಿಮಿಯಾ ಸಮಸ್ಯೆ**

ಯಾರಿಗೆ ಅನಿಮಿಯ ಇರುತ್ತದೆ ಅವರಿಗೆ ರಕ್ತದಲ್ಲಿ ಕಬ್ಬಿಣದ ಅಂಶದ ಕೊರತೆ ಇರುತ್ತದೆ ಎಂದು ಹೇಳುತ್ತಾರೆ. ಇಂತಹ ಜನರಿಗೆ ಯಾವಾಗಲೂ ದೈಹಿಕ ಆಯಾಸ ಮತ್ತು ಸುಸ್ತು ಆವರಿಸುತ್ತದೆ.

ಸ್ವಲ್ಪ ಘಾಸಿಯಾದ ಕೆಲಸಗಳನ್ನು ಸಹ ಮಾಡಲು ಸಾಧ್ಯವಾಗುವುದಿಲ್ಲ. ಕಬ್ಬಿಣದ ಅಂಶ ಯಥೇಚ್ಛವಾಗಿರುವ ಆಹಾರ ಪದಾರ್ಥಗಳನ್ನು ಸೇವನೆ ಮಾಡುವುದರಿಂದ ಕ್ರಮೇಣವಾಗಿ ಈ ಸಮಸ್ಯೆಯಿಂದ ಪಾರಾಗಬಹುದು. ಉದಾಹರಣೆಗೆ ತರಕಾರಿಗಳು, ಬೀನ್ಸ್, ಕಾಳುಗಳು ಇತ್ಯಾದಿ.

ರಕ್ತಹೀನತೆ ಸಮಸ್ಯೆ ಇದ್ದವರು, ಅಪ್ಪಿತಪ್ಪಿಯೂ ಇವುಗಳನ್ನು ತಿನ್ನಬಾರದಂತೆ!!

**ನಿದ್ರಾಹೀನತೆ ಸಮಸ್ಯೆ**

ಕೇವಲ ಆಹಾರ ಪದ್ಧತಿಯಿಂದ ಮಾತ್ರ ದೈಹಿಕವಾಗಿ ಸುಸ್ತು ಆಯಾಸ ಎದುರಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ನಿದ್ರಾಹೀನತೆ ಸಮಸ್ಯೆ ಕೂಡ ಒಂದು ಕಾರಣ ಎಂದು ಹೇಳಬಹುದು.

ರಾತ್ರಿಯ ಸಮಯದಲ್ಲಿ ವೈದ್ಯರು ಹೇಳಿದ ಹಾಗೆ ಸರಿಯಾಗಿ 8 ಗಂಟೆಗಳ ಕಾಲ ನಿದ್ರೆ ಮಾಡದೇ ಇದ್ದರೆ ಅದರಿಂದ ಬೆಳಗಿನ ಸಮಯದಲ್ಲಿ ಇಡೀ ದಿನ ಆಯಾಸದಿಂದ ಬಳಲಬೇಕಾಗುತ್ತದೆ.

ಇದರ ಜೊತೆಗೆ ರಾತ್ರಿ ಮಲಗುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಚಹಾ ಅಥವಾ ಕಾಫಿ ಸೇವನೆ ಮಾಡಬಾರದು.

ಆರೋಗ್ಯಕರವಾದ ಆಹಾರ ಪದ್ಧತಿಯನ್ನು ಸಮತೋಲನವಾಗಿ ಹಣ್ಣು ಮತ್ತು ತರಕಾರಿಗಳನ್ನು ಸೇರಿಸಿ ಸೇವನೆ ಮಾಡುವುದರಿಂದ ಉತ್ತಮವಾದ ಆರೋಗ್ಯವನ್ನು ಹೊಂದಬಹುದು.

(ಕೃಪೆ: ವಿ.ಕ)

# ಕುಡಿಯುವ ನೀರಿನ ವಿಷಯದಲ್ಲಿ ಬೇಜವಾಬ್ದಾರಿ ಸಹಿಸುವುದಿಲ್ಲ: ಜಿಲ್ಲಾಧಿಕಾರಿ ಟಿ. ಭೂಬಾಲನ್ ಎಚ್ಚರಿಕೆ



ವಿಜಯಪುರ- ಪ್ರಸಕ್ತ ಬೇಸಿಗೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಈಗಿನಿಂದಲೇ ಯೋಜನೆಯೊಂದನ್ನು ರೂಪಿಸಿಕೊಂಡು ಕಾರ್ಯ ನಿರ್ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಸೂಚನೆ ನೀಡಿದರು.

ಜಿಲ್ಲೆಯ ವಿವಿಧ ತಾಲೂಕಾ ತಹಶೀಲ್ದಾರ, ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ಸಭಾಂಗಣದಲ್ಲಿ ಬುಧವಾರ ವಿಡಿಯೋ ಸಂವಾದದ ಮೂಲಕ ಸಭೆ ನಡೆಸಿದ ಅವರು, ಕಳೆದ ವರ್ಷಕ್ಕೆ ಹೋಲಿಸಿದ್ದಲ್ಲಿ ಪ್ರಸ್ತುತ ಜಿಲ್ಲೆಯಲ್ಲಿ ಅಂತಹ ಯಾವುದೇ ಸಮಸ್ಯೆ ಎದುರಾಗುವುದಿಲ್ಲ. ಈಗಿರುವ ನೀರನ್ನು ಬಳಕೆ ಮಾಡಿಕೊಂಡಲ್ಲಿ ಏಪ್ರಿಲ್ ಅಂತ್ಯದವರೆಗೆ ಯಾವುದೇ ಸಮಸ್ಯೆಯಾಗುವುದಿಲ್ಲ. ಆದಾಗ್ಯೂ ಮುಂದಿನ ಜುಲೈ ಅಂತ್ಯದವರಗೆ ಜಿಲ್ಲೆಗೆ ಬೇಕಾಗುವ ನೀರಿನ ಅವಶ್ಯಕತೆಗನುಸಾರವಾಗಿ ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಟ್ಟುಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

ಕೆರೆಗಳಲ್ಲಿ ನೀರು ತುಂಬಿಸಲು ಪ್ರತಿ 45 ದಿನಗಳಿಗೆ 2.5 ಟಿಎಂಸಿ ಅವಶ್ಯಕತೆ ಇದ್ದು, ಈಗಿರುವ ನೀರನ್ನು ಸದ್ಬಳಕೆ ಮಾಡಿಕೊಂಡಲ್ಲಿ ಬರುವ ಏಪ್ರಿಲ್ ಅಂತ್ಯದವರೆಗೆ ಯಾವುದೇ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳಬಹುದಾಗಿದ್ದು, ಈ ನಿಟ್ಟಿನಲ್ಲಿ ಸೂಕ್ತ ಯೋಜನೆ ರೂಪಿಸಿಕೊಂಡು ಕುಡಿಯುವ ನೀರು ಪೂರೈಕೆ ಯೋಜನೆಗಳಿಗೆ ಯಾವುದೇ ತೊಂದರೆಯಾಗದಂತೆ ಕಾರ್ಯ ನಿರ್ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಇರುವ 157 ಕೆರೆಗಳ ಪೈಕಿ 21 ಕೆರೆಗಳಲ್ಲಿ ಶೇ.1ರಿಂದ 30ರಷ್ಟು, 28 ಕೆರೆಗಳಲ್ಲಿ ಶೇ.31 ರಿಂದ 50 ರಷ್ಟು, 92 ಕೆರೆಗಳಲ್ಲಿ ಶೇ.50 ರಿಂದ 99 ರಷ್ಟು ಅಂದರೆ 1.68 ಟಿಎಂಸಿ ನೀರು ಲಭ್ಯವಿದೆ. ಈ ಕೆರೆಗಳಲ್ಲಿನ ನೀರು ವ್ಯಯತವಾಗದಂತೆ ಹಾಗೂ ನೀರಿನ ಸದ್ಬಳಕೆಯಾಗುವಂತೆ ನೋಡಿಕೊಳ್ಳಬೇಕು. ಕೆರೆಗಳ ಸುತ್ತಮುತ್ತಲೂ ಜಾಲಿ ಕಂಟಿಗಳನ್ನು ತೆರವುಗೊಳಿಸಿ ಸ್ವಚ್ಛಗೊಳಿಸಬೇಕು.

ಜಾಲಿ ಕಂಟಿಗಳು ಬೆಳೆದು ನೀರಿನ ವ್ಯಯುವಾಗದಂತೆ ನೋಡಿಕೊಳ್ಳಬೇಕು. ಬಹುಹಳ್ಳಿ ಯೋಜನೆ ಕೆರೆಗಳ ಸುತ್ತಲಿನಲ್ಲಿ ನೀರಾವರಿಗಾಗಿ ಅನಧಿಕೃತವಾಗಿ ಅಳವಡಿಸಲಾದ ಪಂಪಸೆಟ್‌ಗಳನ್ನು ಕೂಡಲೆ ತೆರವುಗೊಳಿಸಲು ಹೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದ ಅವರು, ಈ ಕಾರ್ಯದಲ್ಲಿ ಯಾವುದೇ ಲೋಪವನ್ನು ಸಹಿಸುವುದಿಲ್ಲ. ಇದಕ್ಕೆ ಗ್ರಾಮೀಣ ಕುಡಿಯುವ ನೀರು ಇಲಾಖೆ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿಸಿ ಕ್ರಮ ವಹಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಅಧಿಕಾರಿಗಳು ಜಿಲ್ಲೆಯಲ್ಲಿನ ಬಹುಹಳ್ಳಿ ಕುಡಿಯುವ ನೀರಿನ ಯೋಜನೆ ಕೆರೆಗಳಲ್ಲಿನ ನೀರು ವಿನಾಕಾರಣ ಬಳಕೆಯಾಗದಂತೆ ನೋಡಿಕೊಳ್ಳಬೇಕು. ಪ್ರತಿ ಸೋಮವಾರ ನೀರಿನ ಪ್ರಮಾಣದ ವರದಿಯನ್ನು ಸಲ್ಲಿಸುವಂತೆ ಸೂಚಿಸಿದ ಅವರು, ಕುಡಿಯುವ ನೀರನ್ನು ನೀರಾವರಿಗೆ ಬಳಕೆಯಾಗದಂತೆ ಕಟ್ಟೆಚ್ಚರ ವಹಿಸುವಂತೆ ಅವರು ಸೂಚನೆ ನೀಡಿದರು.

ನಾರಾಯಣಪುರ ಜಲಾಶಯದಿಂದ 4.3 ಹಾಗೂ 1.7 ಟಿಎಂಸಿ ನೀರನ್ನು ಕುಡಿಯುವ ನೀರಿಗಾಗಿ ಕಾಯ್ದಿರಿಸಲಾಗಿದೆ. ಕಾಲುವೆಗಳ ಮೂಲಕ 1.1 ಟಿಎಂಸಿ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಪಟ್ಟಣ ಪಂಚಾಯತ್‌ಗಳಿಗೆ ಬರುವ ಜೂನ್-ಜುಲೈ ವರೆಗೆ ಕುಡಿಯುವ ನೀರು ಪೂರೈಸಲು 1.13 ಟಿಎಂಸಿ ನೀರು ಬಳಕೆಯಾಗಲಿದ್ದು, 4.3 ಟಿಎಂಸಿ ನೀರು ಆಲಮಟ್ಟಿ ಜಲಾಶಯದಲ್ಲಿ ಕಾಯ್ದಿರಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಬರಲಿರುವ ಬೇಸಿಗೆಯಲ್ಲಿ ಸಿಂದಗಿಯ ಕೆಲವು ವಾರ್ಡ್‌ಗಳಲ್ಲಿ ಮಾತ್ರ ಒಂದು ವಾರಗಳ ಕಾಲ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದಾಗಿದ್ದು, ಈ ಸಂದರ್ಭದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಬೇಕಾಗುತ್ತದೆ. ಕೆರೆತುಂಬುವ ಯೋಜನೆಯಡಿ 4.4 ಟಿಎಂಸಿ ನೀರು ಉಳಿದಿದೆ. ತುಬಚಿ-ಬಬಲೇಶ್ವರ ನೀರಾವರಿ ಯೋಜನೆಯಲ್ಲಿ 0.5 ಟಿಎಂಸಿ ನೀರು ಕಾಯ್ದಿರಿಸಲಾಗಿತ್ತು. ಆದರೆ 1.6 ಟಿಎಂಸಿ ನೀರು ಹೆಚ್ಚುವರಿಯಾಗಿ ಬಳಕೆ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ಒದಗಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ, ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರೂದ್ದಿನ ಸೌದಾಗರ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಮನುಕುಲದ ಶ್ರೇಯಸ್ಸಿಗೆ ಶರಣರು ಬಾಳಿ ಬೆಳಗಿದ್ದಾರೆ:ಬಿರಾದಾರ



ತಾಳಿಕೋಟೆ- ಬಸರಕೋಡದ ಪವಾಡ ಬಸವೇಶ್ವರರು ಮಾಡಿದಂತಹ ಪವಾಡಗಳು ಜಗತ್ತ ಜಾಹೀರವಾಗಿದ್ದು ಅವರು ಭಕ್ತರ ಮೇಲಿಟ್ಟ ಪ್ರೀತಿ ವಾತ್ಸಲ್ಯ ಎಂಬವುಗಳು ಮಾನವ ಜೀವನವನ್ನೇ ಸನ್ಮಾರ್ಗಕ್ಕೆ ಕೊಂಡೊಯಲು ಕಾರಣವಾಗಿವೆ ಎಂದು ಹೇಳಿದರೆ ತಪ್ಪಾಗಲಾರದೆಂದು ಬಸರಕೋಡ ಪವಾಡ ಬಸವೇಶ್ವರ ಸಂಸ್ಥೆಯ ಅಧ್ಯಕ್ಷರಾದ ಕೆ.ವಾಯ್. ಬಿರಾದಾರ ಅವರು ನುಡಿದರು.

ಮಂಗಳವಾರರಂದು ಶ್ರೀ ಶರಣಮುತ್ಯಾರವರ ಜಾತ್ರೋತ್ಸವ ನಿಮಿತ್ಯವಾಗಿ ಶ್ರೀಮಠದ ಪ್ರಾಂಗಣದಲ್ಲಿ ಶ್ರೀ ಪವಾಡ ಬಸವೇಶ್ವರರವರ ಮಹಾ ಪುರಾಣದ 11ನೇ ದಿನದಂದು ಮುತ್ತೈದೆಯರ ಕುರಿತು ಏರ್ಪಡಿಸಲಾದ ಉಡಿ ತುಂಬುವ ಕಾರ್ಯಕ್ರಮಕ್ಕೆ ತಮ್ಮ ಸಂಸ್ಥೆಯ ಪದಾಧಿಕಾರಿಗಳ ಹಾಗೂ ಸುಮಂಗಲೆಯರ ಒಳಗೊಂಡು ಚಾಲನೆ ನೀಡಿ ಮಾತನಾಡುತ್ತಿದ್ದ ಅವರು 1985 ಹಾಗೂ 88 ರಲ್ಲಿ ಗುರಸಂಗಪ್ಪ ಹಗರಟಗಿ ಎಂಬವರು ಪವಾಡ ಬಸವೇಶ್ವರರ ಅವರ ಪುರಾಣವನ್ನು ಬರೆದಿದ್ದಾರೆ.

ಆ ಪುರಾಣದಲ್ಲಿ ಇಡೀ ಪವಾಡ ಬಸವೇಶ್ವರ ಅವರ ಜೀವನ ಚರಿತ್ರೆಯೇ ಒಳಗೊಂಡಿದೆ ಎಂದರು. ಬಸವೇಶ್ವರರು ಭಕ್ತೋದ್ದಾರ, ಜನೋದ್ದಾರಕ್ಕಾಗಿಯೇ ಜನ್ಮ ತಾಳಿ ಬಂದವರಾಗಿದ್ದು ಅವರು ಯಾವ ಫಲಾಪೇಕ್ಷೆ ಮಾಡಿದ್ದಿಲ್ಲಾ ಬಡ ಬಗ್ಗರ ಬಗ್ಗೆ ಹಾಗೂ ಸಾದು ಸಂತರ ಬಗ್ಗೆ ಕಾಳಜಿ ವಹಿಸುತ್ತಾ ಸಾಗಿದ್ದ ಅವರು ದಾಸೋಹ ವ್ಯವಸ್ಥೆಯನ್ನು ಸದಾಕಾಲ ನಡೆಯಬೇಕೆಂಬ ಉದ್ದೇಶ ಅವರದ್ದಾಗಿತ್ತೆಂದರು.

ಬಸರಕೋಡದಲ್ಲಿ ಶ್ರೀಗಳ ಗದ್ದುಗೆಗೆ ದಿನನಿತ್ಯ 3 ರಿಂದ 4 ಸಲ ಮಹಾ ಪೂಜಾ ಕಾರ್ಯಕ್ರಮಗಳು ಜರುಗುತ್ತಾ ಸಾಗಿವೆ ಕಳೆದ 10-15 ವರ್ಷಗಳಿಂದಲೂ ಪುರಾಣಿಕರಾದ ಮಹಾದೇವಯ್ಯ ಶಾಸ್ತ್ರೀಗಳು ಪವಾಡ ಬಸವೇಶ್ವರರ ಪುರಾಣವನ್ನು ಅಧ್ಯಯನ ಮಾಡಿ ಅವರ ಇತಿಹಾಸವನ್ನೇ ವಿವರಿಸುತ್ತಾ ಭಕ್ತರನ್ನು ಸನ್ಮಾರ್ಗಕ್ಕೆ ಕೊಂಡೊಯುತ್ತಿದ್ದಾರೆಂದರು. ತಾಳಿಕೋಟೆ ಶರಣಮುತ್ಯಾರ ಹಾಗೂ ಶ್ರೀ ಖಾಸ್ಗತ ಶಿವಯೋಗಿಗಳ ಸಮಕಾಲಿನವರು ಪವಾಡ ಬಸವೇಶ್ವರರಾಗಿದ್ದು ಅಂತಹ ಮಹಿಮಾ ಪುರುಷನ ಇತಿಹಾಸವನ್ನು ಆಲಿಸಿ ಅವರು ಹಾಕಿಕೊಟ್ಟ ಮಾರ್ಗದತ್ತ ನಡೆಯಬೇಕೆಂದರು.

ಅವರು ತಮ್ಮ ಜೀವಿತ ಕಾಲದಲ್ಲಿ ಜೀವನದ ಸಂದೇಶವನ್ನು ಯಾರಿಗೂ ತಿಳಿಸದೇ ಬಾಳಿ ಬೆಳಗಿದ ಅವರ ಪವಾಡ ಅವರು ಚಿಕ್ಕವರಿರುವಾಗಲೇ ಅದ್ಭುತ್‌ವಾಗಿ ಪರಿಣಮಿಸುತ್ತಾ ಸಾಗಿದ್ದವು ಎಂದ ಅವರು ಶರಣರ ಸಂದೇಶಗಳು ಜೀವನವನ್ನು ಅದ್ಭುತ್ ಗೊಳಿಸುತ್ತವೆ ಕಷ್ಟ ಕಾರ್ಪಣ್ಯಗಳನ್ನು ಬಯಲು ಮಾಡುವ ಶಕ್ತಿ ಶರಣರ ಸಂದೇಶಗಳಲ್ಲಿವೆ ಎಂದರು.

ಇನ್ನೋರ್ವ ಪುರಾಣ ಪ್ರವಚನಕಾರರಾದ ಮಹಾದೇವಯ್ಯ ಶಾಸ್ತ್ರೀಗಳು ಮಾತನಾಡಿ ಪವಾಡ ಬಸವೇಶ್ವರರ ಮಹಾ ಪುರಾಣದಲ್ಲಿ ಈ ಉಡಿ ತುಂಬುವ ಮಹಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಸತಿ ಪತಿಗಳ ಆಯುಷ್ಯ ಹೆಚ್ಚಾಗಲಿ ಎಂಬುದೇ ಈ ಉಡಿ ತುಂಬುವ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಮಂಡೋದರಿ, ಅರುಂಧತಿ ಅವರ ಸ್ಮರಣೆಯನ್ನು ಮಾಡಿದರೆ ದೇವರ ಸ್ಮರಣೆಯನ್ನು ಮಾಡಿದಂತಾಗುತ್ತದೆ ಅದರಂತೆ ಮುತ್ತೈದ್ಯೆಯರ ಸ್ಮರಣೆ ಮಾಡಬೇಕೆಂಬುದಿದೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ಸಂಬಂದಿತ ಸಾಮಾನುಗಳನ್ನು ಹಾಕಿ ವಿಧಿ ವಿಧಾನಗಳೊಂದಿಗೆ ತುಂಬಲಾಗುತ್ತದೆ ಈ ಹಿಂದೆ ಪವಾಡ ಬಸವೇಶ್ವರರ ಸಮಯದಲ್ಲಿ ನಡೆದಂತಹ ಈ ಕಾರ್ಯಕ್ರಮ ಇಂದು ಹಾಗೆ ಆಗಬೇಕೆಂಬ ಉದ್ದೇಶ ನಮ್ಮದಾಗಿದೆ ಎಂದ ಅವರು ಸತಿ ಪತಿಯರು ಒಳ್ಳೆಯ ಭಾವನೆಯೊಂದಿಗೆ ಜೀವನ ಸಾಗಿಸುತ್ತಿದ್ದರೆ.

ಅವರಿಂದ ಜನ್ಮ ತಾಳುವ ಮಕ್ಕಳು ಸಂತರಾಗುತ್ತಾರೆಂದು ಉಡಿ ತುಂಬುವ ಕಾರ್ಯಕ್ರಮದ ಸವಿಸ್ತಾರ ವಿವರಣೆ ನೀಡಿದ ಅವರು ಹೇಮರಡ್ಡಿ ಮಲ್ಲಮ್ಮ ಇದ್ದು ಜಯಿಸಿ ಗಂಡನನ್ನು ದೇವರನ್ನಾಗಿ ಮಾಡಿ ಜಯಶಾಲಿ ಯಾದಳು ಎಂಬುದರ ಕುರಿತು ಮಲ್ಲಮ್ಮಳ ಇತಿಹಾಸ ವಿವರಿಸಿದ ಶಾಸ್ತ್ರೀಗಳು ಅಹಿಂಸೆ ಮಾರ್ಗದಿಂದ ನೀತಿವಂತತನದಿಂದ ಪವಾಡ ಬಸವೇಶ್ವರರು ನಡೆಯುತ್ತಾ ಸಾಗಿದಾಗ ಅವರಿಗೆ ಕೆಲವು ಕುಚೇಷ್ಠಿಗಳು ತಮ್ಮದೇ ಆದ ಇಲ್ಲ ಸಲ್ಲದ ಕಾರ್ಯಗಳನ್ನು ನಡೆಸಿ ಕೊನೇಗೆ ಬಸವೇಶ್ವರರ ಪವಾಡಗಳನ್ನು ನೋಡಿ ಕ್ಷಮೆಯಾಚಿಸಿದ್ದೇನು ಕಡಿಮೇನಿಲ್ಲಾ ಎಂದು ಶಾಸ್ತ್ರೀಗಳು ವಿವರಿಸಿದರು.

ಈ ಉಡಿ ತುಂಬುವ ಕಾರ್ಯಕ್ರಮದಲ್ಲಿ ಸಾವಿರಕ್ಕೂ ಮೇಲ್ಪಟ್ಟು ಸುಮಂಗಲೆಯರು ಪಾಲ್ಗೊಂಡು ಉಡಿ ತುಂಬಿಸಿಕೊಂಡು ಪವಾಡ ಬಸವೇಶ್ವರರ ಹಾಗೂ ಶ್ರೀ ಶರಣಮುತ್ಯಾರ, ಶ್ರೀ ಖಾಸ್ಗತೇಶ್ವರರ ಕೃಪೆಗೆ ಪಾತ್ರರಾದರು.

ವಿಶ್ವನಾಥರೆಡ್ಡಿ ನಾಡಗೌಡ (ಶಳ್ಳಗಿ) ಅವರು ಸಮಸ್ತ ಭಕ್ತಾಧಿಗಳಿಗೆ ಅನ್ನಪ್ರಸಾದ ವ್ಯವಸ್ಥೆ ಮಾಡಿದ್ದರು.

ಇದೇ ಸಮಯದಲ್ಲಿ ಪವಾಡ ಬಸವೇಶ್ವರ ಸಂಸ್ಥೆಯ ಅಧ್ಯಕ್ಷ ಬಿರಾದಾರ ಅವರಿಗೆ ಸಂಸ್ಥೆಯ ಶ್ರೀಮಂತ ಸಿಂಧು ಬಲ್ಲಾಳ ನಾಡಗೌಡ, ಸಂಗನಗೌಡ ಬಿರಾದಾರ(ಅಪ್ಪುಸಾಹುಕಾರ), ವೀರಯ್ಯ ಮಂಕಣಿ ಅವರಿಗೆ ಹಾಗೂ ಈ ಉಡಿ ತುಂಬುವ ಕಾರ್ಯಕ್ರಮಕ್ಕೆ ಸಹಕರಿಸಿದ ತಾಳಿಕೋಟೆ ಪಟ್ಟಣದ ಯುವ ಜನತೆಗೆ ಸನ್ಮಾನಿಸಿ ಗೌರವಿಸಲಾಯಿತು.

# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಣ್ಣಿನ ಉಚಿತ ತಪಾಸಣೆ ಶಿಬಿರ




ಯಲಗೋಡ-ದೇವರ ಹಿಪ್ಪರಗಿ ತಾಲ್ಲೂಕಿನ ಯಲಗೋಡ ಗ್ರಾಮದಲ್ಲಿ ಶುಕ್ರವಾರ ದಂದು ಬನಶಂಕರಿ ನೇತ್ರಾಲಯ ವಿಜಯಪುರ ಇವರ ಆಸ್ಪತ್ರೆಯ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಶಿಬಿರಯನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು. ಈ ಶಿಬಿರದ ನೇತೃತ್ವ ವಹಿಸಿದ ಖ್ಯಾತ ತಜ್ಞರಾದ. ಡಾ, ರಾಘವೇಂದ್ರ ಇಜೇರಿ ಯವರು ಈ ಶಿಬಿರ ಉದ್ಘಾಟನೆ ಮಾಡಿದರು.

ಅವರಿಗೆ ಗ್ರಾಮದ ವತಿಯಿಂದ ಸನ್ಮಾನ ಮಾಡಿದರು. ಹಾಗೂ ಕಾರ್ಯಕ್ರಮದ ಮುಖ್ಯ ಅಥಿತಿಗಳಾದ ಡಾ, ಮುತ್ತು ಬ್ಯಾಕೋಡ ಶಾಲೆಯ ಮುಖ್ಯ ಗುರುಗಳಾದ ಮಲ್ಲಿಕಾರ್ಜುನ ದೊಡ್ಡಮನಿ, ಎಸ್.ಡಿ.ಎಮ್.ಸಿ ಅಧ್ಯಕ್ಷರಾದ ಮಾಂತೇಶ ಕೂಟನೂರ ಪತ್ರಕರ್ತರಾದ ಭೀಮಪ್ಪ ಹಚ್ಯಾಳ.

ಈ ಶಿಬಿರವನ್ನು ಉದ್ದೇಶಿಸಿ ಮಾತನಾಡಿದ ಹುಯೋಗಿ ತಳ್ಳೋಳ್ಳಿ, ಡಾ, ಚಿದಾನಂದ ಶಾಸ್ತ್ರೀಯವರು, ಹಾಗೂ ಈ ಶಿಬಿರಕ್ಕೆ ಯಲಗೋಡ, ವಂದಾಲ ಕದರಪೂರ ಗ್ರಾಮಗಳು, ಸಾರ್ವಜನಿಕರು ಈ ಕಣ್ಣಿನ ಉಚಿತ ತಪಾಸಣೆ ಶಿಬಿರಕ್ಕೆ ಭಾಗವಹಿಸಿದ್ದರು.

# ಬದಾಮಿ : ಕಲಿಕಾ ಹಬ್ಬ ಉದ್ಘಾಟನೆ



ಬಾದಾಮಿ- ಮಕ್ಕಳ ಕಲಿಕೆ ಯನ್ನು ಸರಳೀಕರಣಗೊಳಿಸಲು ಹಾಗೂ ಕಲಿಕೆಯಲ್ಲಿ ಆಸಕ್ತಿಗೊಳಿಸಲು ಎಫ್.ಎಲ್.ಎನ್.ಕಲಿಕೆ ಅನುಕೂಲವಾಗುತ್ತದೆ ಎಂದು ಶಿಕ್ಷಣ ಸಂಯೋಜಕ ಬಿ.ಟಿ.ಹಳ್ಳಿ ಹೇಳಿದರು.

ತಾಲೂಕಿನ ಮಣ್ಣೇರಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಚೊಳ ಚಗುಡ್ಡ ಕ್ಲಷ್ಟರ್ ಮಟ್ಟದ ಕಲಿಕಾ ಹಬ್ಬವನ್ನು ಉದ್ದೇಶಿಸಿ ಅವರು ಮಾತನಾಡಿದರು. ಗ್ರಾ.ಪಂ. ಸದಸ್ಯ ರಾಮನಗೌಡ ಅಯ್ಯ ನಗೌಡರ ಎಫ್.ಎಲ್.ಎನ್. ಕಲಿಕಾ ಹಬ್ಬದ ಕಾರ್ಯಕ್ರಮ ವನ್ನು ಉದ್ಘಾಟಿಸಿ ಮಾತನಾಡಿ ಕಾರ್ಯಕ್ರಮ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಯೋಗ್ಯವಾಗಿದೆ ಎಂದು ಹೇಳಿದರು. ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಕವಿತಾ ಚನಶೆಟ್ಟಿ ಮಾತನಾಡಿ ಕಾರ್ಯಕ್ರಮವನ್ನ ಬಹಳಷ್ಟು ಅದ್ದೂರಿಯಾಗಿ ಎಲ್ಲ ಶಿಕ್ಷಕರು ಸೇರಿ ಹಾಗೂ ಗ್ರಾಮಸ್ಥರ ಸಹಕಾರ ಪಡೆದು ಮಾಡಿದ್ದನ್ನು ಪ್ರಶಂಶಿಸಿದರು.

ಸರಕಾರಿ ನೌಕರ ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಟಿ ಪಟ್ಟಣಶೆಟ್ಟಿ ಹಾಗೂ ಸಂಪನ್ಮೂ ಲ ವ್ಯಕ್ತಿ ಸುರೇಶ ಬೊಂಬ್ಲೆ ಮಾ ತನಾಡಿದರು. ಸಹಶಿಕ್ಷಕರಾದ ಎಚ್.ಎನ್.ನರಸಾಪುರ, ಜೆಡ್.ಕೆ.ಹುಸೇನ್ ಬಾಯಿ, ಬನಶಂಕರಿ ಮುಖ್ಯಶಿಕ್ಷಕಿ ಪಿ.ಎನ್.ಚಳಗೇರಿ, ಎಂ.ಪಿ. ಅಂಗಡಿ, ಎಸ್.ಎಚ್.ಪೂಜಾರ, ಎಚ್.ಎ.ತಾಳಿಕೋಟಿ ಇವರನ್ನು ಶಾಲೆ ವತಿಯಿಂದ ಗೌರವಿಸಲಾಯಿತು.

ದಾನಿಗಳಾದ ಬಸವರಾಜ ಡಾಣಕಶಿರೂರ, ಶಿವಪ್ಪ ಬಸಲಿಂಗಪ್ಪನವರ, ಅಲ್ಲಾ ಗೌಡ ಅಯ್ಯನಗೌಡ್ರು, ಭೀಮನಗೌಡ ಗೌಡರ, ಸುರೇಶ ಕೋಟಿ, ಶರಣಪ್ಪ ಬಾಲನಗೌಡ್ರು, ಆರ್. ಆರ್.ಹೊಸೂರ, ಎಚ್.ಆರ್. ಉಂಡಿ, ಎಸ್.ಬಿ.ಲಾಂಡೆ, ಬೀಮನಗೌಡ ಗಿರಿಯಪ್ಪ ಗೌಡ್ರೆ, ಚಂದ್ರಗೌಡ ಪಾಟೀಲ, ಫಕೀರಗೌಡ ಪಾಟೀಲ, ಬಸನಗೌಡ ಬಸಲಿಂಗಪ್ಪನವರ, ಹನುಮಂತ ಗೌಡ ಪಾಟೀಲ, ದೇವೇಂದ್ರಗೌಡ ಅಯ್ಯನಗೌಡ್ರ, ಬರಮಪ್ಪ ಮಾದರ, ಮುತ್ತಪ್ಪ ಹರಿಜನ, ರಾಮಪ್ಪ ಡಾಣಕ ಶಿರೂರ, ರಾಮಪ್ಪ ಮಾಡಲಗಿರಿ, ಭೀಮಪ್ಪ ಕುರಿ, ಭರ್ಮಪ್ಪ ಕನಕಪ್ಪ ಮಾದರ, ದೇವಪ್ಪ ಹಿರೇಹೊಳೆ ಮೊದಲಾದವರು ಕಾರ್ಯಕ್ರಮಕ್ಕೆ ಕೊಡುಗೆಯನ್ನು ಕೊಟ್ಟಿದ್ದಕ್ಕಾಗಿ, ಎಲ್ಲರನ್ನೂ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವೇದಿಕೆಯ ಮೇಲೆ ಎ.ಎಂ.ಗೌ ಡರ, ಆರ್.ಎಂ.ಸಾರವಾಡ, ಆರ್.ಆರ್.ಹೊಸೂರ, ಕೆ.ಎಚ್ ಹಲಕುರ್ಕಿ, ಎ.ಜಿ.ಅಂಬಿಗೇರ, ಎಸ್.ಎಸ್.ಕಲಾದಗಿ, ಎಂ.ಕೆ ಶಿವಪೂರ, ಎಸ್.ಎಸ್ ಕಲಾದ ಗಿ, ರಾಜ್ಯ ಸರ್ಕಾರ ನೌಕರ ಸಂಘದ ನಿರ್ದೇಶಕರಾದ ಆರ್.ಟಿ.ಪಟ್ಟಣಶೆಟ್ಟಿ, ಅರವಿಂದ ಅಣ್ಣಿಗೇರಿ, ಅರ್.ಬಿ.ಬಿಲ್ಲಾರ, ಎಚ್.ಸಿ.ಚಿಕ್ಕೂರ, ಶಿಕ್ಷಕರ ಸಂಘದ ನಿರ್ದೇಶಕರಾದ ವಿನಾಯಕ ವೈಕುಂಟೆ, ಎಂ.ಎಂ ನೈನಾಪುರ, ಪಿ.ಆರ್.ಚಿಕ್ಕಣ್ಣವರ, ಆರ್.ಬಿ.ಜೇವೊಜಿ ಮೊದಲಾದವರು ಸನ್ಮಾನಿಸಿದರು. ಎ.ಎಸ್.ಹಿರೇಮಠ ಎಂ.ಪಿ. ಅಂಗಡಿ, ಎಲ್.ಪಿ.ಸುಳ್ಳದ, ಎಸ್.ಎ.ಹದ್ಲಿ, ಎನ್ ಎಸ್ ಬಸರಿ, ಎಸ್.ಹೆಚ್.ಪೂಜಾರ, ಎಚ್.ಎ.ತಾಳಿಕೋಟಿ, ಎಂ. ಎಸ್ ಸುಣಗಾರ, ಎಸ್ ಆರ್ ಕಾತರಕಿ, ಯಮನೂರು ಎಂ, ಹಾಗೂ ಗ್ರಾಮಸ್ಥರು ವಿದ್ಯಾ ರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಕ್ಷರಬಂಡಿ ಮೆರವಣಿಗೆ; ಅಕ್ಷರ ಬಂಡಿ ಮಾಡಿ, ವಿವಿಧ ವ್ಯಕ್ತಿಗಳ ವೇಷ ಭೂಷಣ ತೊಟ್ಟಂತ ವಿದ್ಯಾರ್ಥಿಗಳನ್ನು ಅಕ್ಷರ ಬಂಡಿಯಲ್ಲಿ ಕುಳ್ಳಿರಿಸಿ, ಮೆರವಣಿಗೆ ಮಾಡಲಾಯಿತು. ಡೊಳ್ಳು ಕುಣಿತ, ಕರಡಿ ಮಜಲು, ಲೇಜಿಮು ವಿವಿಧ ಆಟಗಳನ್ನು ಆಡುತ್ತ ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಕಾರ್ಯಕ್ರಮದ ಪ್ರಾರ್ಥನೆ ಯನ್ನು ಶಾಲಾ ವಿದ್ಯಾರ್ಥಿಗಳಿಂದ ಮಾಡಿಸಲಾಯಿತು. ಎಸ್.ಬಿ.ಲಾಂಡೆ ಸ್ವಾಗತಿಸಿದರು. ಎಚ್.ಡಿ.ಕುರಿ ನಿರೂಪಿಸಿದರು.

# ಅಪಘಾತ ಪಡಿಸಿದ ಬೋರವೆಲ್ ಚಾಲಕನಿಗೆ ಶಿಕ್ಷೆ

ಬಾಗಲಕೋಟೆ- ನಿರ್ಲಕ್ಷತನದಿಂದ ಅತೀ ವೇಗವಾಗಿ ಬೋರವೆಲ್ ವಾಹನ ಚಲಾಯಿಸಿ ಟಂಟಂ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಟಂಟಂದಲ್ಲಿದ್ದ ಓರ್ವ ಮಹಿಳೆ ಸ್ಥಳದಲ್ಲಿಯೇ ಮರಣ ಹೊಂದಿದ್ದರ ಪರಿಣಾಮ ಆರೋಪಿತ ಬೋರ್‌ವೆಲ್ ಚಾಲಕನಿಗೆ 1 ವರ್ಷ ಶಿಕ್ಷೆ ಹಾಗೂ 7500 ರೂ.ಗಳ ದಂಡಿ ವಿಧಿಸಿ ಪ್ರಧಾನ ಜೆ.ಎಂ.ಎಫ್.ಸಿ ನ್ಯಾಯಾಲಯ ಆದೇಶಿಸಿದೆ.

ಆರೋಪಿ ಬೋರವೆಲ್ ವಾಹನದ ಚಾಲಕ ಚಿದಾನಂದ ಕಬಾಡದ ಸಂಗಮ ಕ್ರಾಸ್ ಕಡೆಯಿಂದ ಬಾಗಲಕೋಟೆ ಶಹರ ಕಡೆಗೆ ಅತೀ ವೇಗವಾಗಿ ನಿರ್ಲಕ್ಷತನದಿಂದ ಚಲಾಯಿಸಿ ಮುಂದೆ ಹೊರಡು ಪ್ಯಾಸೆಂಜರ ಟಂಟಂ ವಾಹನಕ್ಕೆ ಅಪಘಾತ ಪಡಿಸಿ ಟಂಟಂದಲ್ಲಿದ್ದ ಓರ್ವ ಮಹಿಳೆಯನ್ನು ಮರಣ ಪಡಿಸಿದ್ದು, ಚಾಲಕ ಸೇರಿ ಉಳಿದ ಪ್ಯಾಸೆಂಜರ ಗಾಯಗೊಳ್ಳುವಂತೆ ಮಾಡಿದ್ದಾರೆ. ಈ ಕುರಿತು ಬಾಗಲಕೋಟೆ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಪಿಎಸ್‌ಐ ಗಣಪತಿ ಕಂಗನೊಳ್ಳಿ ಸಿಪಿಐ ಶ್ರೀಶೈಲ ಗಾಬಿ ಆರೋಪಿ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ವಿಚಾರಣೆಗೆ ಕೈಗೊಂಡ ಬಾಗಲಕೋಟೆ ಪ್ರಧಾನ ಜೆ.ಎಂ.ಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಮುರುಗೇಂದ್ರ ತುಬಾಕೆ ಅವರು ಆರೋಪಿಯ ವಿರುದ್ದ ಅಪರಾಧ ಸಾಬೀತಾದ ಹಿನ್ನಲೆಯಲ್ಲಿ ಆರೋಪಿಗೆ 1 ವರ್ಷ ಜೈಲು ಶಿಕ್ಷೆ ಹಾಗೂ 7500 ರೂ.ಗಳ ದಂಡ ವಿಧಿಸಿ ತೀರ್ಪು ನೀಡಿರುತ್ತಾರೆ. ಸರಕಾರದ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕರಾದ ಶಾರದಾ ಬದಾಮಿ ಪ್ರಕರಣದ ವಾದವನ್ನು ಮಂಡಿಸಿದ್ದರು.




**"SATYASHRAYA"** Kannada daily Editor, Printer, Publisher & Owned by **ANAND SHARANABASAVARAJ. JIGAJINNI,** Jigajinni Printing Press Janata Bazar Compound, Bagalkot-587101. Printed at Jigajinni Printing Press Janata Bazaar Compound, Bagalkot-587101. Dist : Bagalkot, Karanataka State.